RNU AIR DHARWAD

## APRIL 29, 2024

## ALL INDIA RADIO- DHARWAD

## PRADESH SAMACHARA (KANNADA) 7:05 AM

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ರೈತರ ನೆರವಿಗೆ ಧಾವಿಸಲು ಅನುವಾಗುವ ರೀತಿ, ಕೇಂದ್ರ ಬರ ಪರಿಹಾರ ನೀಡಲಿ – ಸಿದ್ದರಾಮಯ್ಯ ಆಗ್ರಹ.**
- **ಸಿಇಟಿ ಪರೀಕ್ಷೆ: ಪಠ್ಯಕ್ಕೆ ಹೊರತಾದ ಪ್ರಶ್ನೆ ಕೈಬಿಡಲು ತೀರ್ಮಾನ; ಎಂ.ಎಸ್. ಶ್ರೀಕರ.**
- **ಧಾರವಾಡದಲ್ಲಿ, ಇಂದು ಮತ್ತು ನಾಳೆ, ಕರ್ನಾಟಕ ಶಾಸನ ಸಾಹಿತ್ಯ ಪರಿ ‘ತ್ತಿನ, ಮೊದಲ ಮಹಾಧಿವೇಶನ.**
- **ದಶಕದ ಹಿಂದೆ ದೇಶದ ಮತದಾರ ನೀಡಿದ ಒಂದೊಂದು ಮತ, ದೇಶವನ್ನು ಅಭಿವೃದ್ಧಿ ಪಥದಲ್ಲಿ ಮುನ್ನಡೆಸಿದೆ – ಪ್ರಧಾನಮಂತ್ರಿ ನರೇಂದ್ರ ಮೋದಿ.**

<><><>

**ಈಗ ವಾರ್ತೆಗಳ ವಿವರ**

<><><>

**ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ – ಎನ್.ಡಿ.ಆರ್.ಎಫ್. ಮಾರ್ಗಸೂಚಿ ಅನ್ವಯ, ಕೇಂದ್ರ ಸರ್ಕಾರ ರಾಜ್ಯಕ್ಕೆ ಬರ ಪರಿಹಾರ ಬಿಡುಗಡೆ ಮಾಡಿದೆ ಎಂದು, ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ್ ಹೇಳಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಸರ್ಕಾರ ಹೆಚ್ಚಿಗೆ ಪರಿಹಾರ ನೀಡಿಲ್ಲ ಎಂದು, ರಾಜ್ಯ ಸರ್ಕಾರ ಪ್ರತಿಭಟಿಸುತ್ತಿರುವುದು, ಸರಿಯಲ್ಲ ಎಂದರು.**

<><><>

**ಈ ಮಧ್ಯೆ, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ, ಕಾಂಗ್ರೆಸ್ ಪಕ್ಷ, ಕೇಂದ್ರ ಸರ್ಕಾರದ ವಿರುದ್ಧ, ವಿಧಾನಸೌಧದ ಮಹಾತ್ಮ ಗಾಂಧಿ ಪ್ರತಿಮೆ ಎದುರು, ಧರಣಿ ನಡೆಸಿತು. ತಮ್ಮ ಸರ್ಕಾರ ಘೋ ‘ಣೆ ಮಾಡಿರುವ ಖಾತ್ರಿ ಯೋಜನೆಗಳಿಗೆ ಹಣ ನೀಡುವಂತೆ ಕೇಳುತ್ತಿಲ್ಲ; ಆದರೆ, ರಾಜ್ಯದಲ್ಲಿ ಭೀಕರ ಬರ ಪರಿಸ್ಥಿತಿಗೆ ಸಿಲುಕಿರುವ ರೈತರ ನೆರವಿಗೆ ಧಾವಿಸಲು, ಅನುವಾಗುವ ರೀತಿಯಲ್ಲಿ, ಪರಿಹಾರ ಒದಗಿಸಬೇಕೆಂದು ಮನವಿ ಮಾಡಿದ್ದಾಗಿ, ಮುಖ್ಯಮಂತ್ರಿ ನುಡಿದರು.**

<><><>

ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕಾಗಿ ನಡೆಸಲಾದ ಸಾಮಾನ್ಯ ಪ್ರವೇಶ ಪರೀಕ್ಷೆ – ಸಿಇಟಿಯನ್ನು ಮತ್ತೇ ನಡೆಸುವ ಬದಲು, ಪಠ್ಯಕ್ಕೆ ಹೊರತಾದ ಪ್ರಶ್ನೆಗಳನ್ನು ಮೌಲ್ಯಮಾಪನ ಪ್ರಕ್ರಿಯೆಯಿಂದ ಕೈಬಿಡಲು, ಉನ್ನತ ಶಿಕ್ಷಣ ಇಲಾಖೆ ನಿರ್ಧರಿಸಿದೆ ಎಂದು, ಇಲಾಖೆಯ ಪ್ರಧಾನ ಕಾರ್ಯದರ್ಶಿ, ಎಂ.ಎಸ್.ಶ್ರೀಕರ ಬೆಂಗಳೂರಿನಲ್ಲಿ ತಿಳಿಸಿದ್ದಾರೆ. ಕಳೆದ ಏಪ್ರಿಲ್ 18 ಮತ್ತು 19 ರಂದು, ಸಿಇಟಿ ಪರೀಕ್ಷೆ ನಡೆದಿತ್ತು. ಪರೀಕ್ಷೆಯಲ್ಲಿ ಭೌತ ವಿಜ್ಞಾನ ವಿಷಯದ 9, ರಸಾಯನ ವಿಜ್ಞಾನ ಮತ್ತು ಗಣಿತ ವಿಷಯದ ತಲಾ 15, ಜೀವವಿಜ್ಞಾನ ವಿಷಯದ 11 ಪ್ರಶ್ನೆಗಳು, ಪಠ್ಯಕ್ಕೆ ಹೊರತಾಗಿದ್ದವು ಎಂದು, ಅವರು ಹೇಳಿದರು. ಪಿಯುಸಿ – 2 ಮತ್ತು ಪಿಯುಸಿ–3ನೇ ಪರೀಕ್ಷೆಗಳು, ಕಾಮೆಡ್–ಕೆ, ಜೆ.ಇ.ಇ. ಮುಖ್ಯ ಪರೀಕ್ಷೆ, ನೀಟ್ ಸೇರಿ, ವಿವಿಧ ಪರೀಕ್ಷೆಗಳು ಮೇ ಮತ್ತು ಜೂನ್ ತಿಂಗಳಲ್ಲಿ ನಡೆಯಲಿರುವ ಕಾರಣ, ಮರು ಪರೀಕ್ಷೆ ನಡೆಸದಿರಲು ತೀರ್ಮಾನಿಸಲಾಗಿದೆ, ಎಂದರು.

<><><>

'ನಮ್ಮ ನಡೆ, ಮತಗಟ್ಟೆ ಕಡೆ', 18ನೇ ಸಾರ್ವತ್ರಿಕ ಲೋಕಸಭೆ ಚುನಾವಣೆ ಹಿನ್ನೆಲೆ, ಮೇ 7 ಮಂಗಳವಾರ, ರಾಜ್ಯದ ಎರಡನೇ ಹಂತದ ಮತದಾನದ ಅಂಗವಾಗಿ, ಸ್ವೀಪ್ ಸಮಿತಿ, 14 ಜಿಲ್ಲಾಡಳಿತಗಳ ಸಹಯೋಗದಲ್ಲಿ, ಸೈಕ್ಲೋಥಾನ್ ಹಾಗೂ ಬೈಕ್ ರ್‍ಯಾಲಿ ಆಯೋಜಿಸಿತ್ತು. ಮತದಾರ ಜಾಗ್ರತಿಗಾಗಿ ಚುನಾವಣಾ ಧ್ವಜಾರೋಹಣ, "ನಾ ಭಾರತ" ದೃಶ್ಯ ಗೀತೆಯನ್ನು ಪ್ರದರ್ಶಿಸಲಾಯಿತು. ಕಿತ್ತೂರು ಕರ್ನಾಟಕ, ಕಲ್ಯಾಣ ಕರ್ನಾಟಕ ಸೇರಿದಂತೆ 14 ಲೋಕಸಭಾ ಕ್ಷೇತ್ರ ವ್ಯಾಪ್ತಿಯ 14 ಜಿಲ್ಲೆಗಳಲ್ಲಿ ಬೆಳಗ್ಗೆ 6.30 ರಿಂದ 9 ಗಂಟೆಯ ವರೆಗೆ, ವಿವಿಧ ಜನ ಜಾಗ್ರತಿ ಕಾರ್ಯಕ್ರಮಗಳು ಜರುಗಿದವು.

<><><>

18ನೇ ಲೋಕಸಭೆ ಸಾರ್ವತ್ರಿಕ ಚುನಾವಣೆ ಹಿನ್ನೆಲೆ, ರಾಜ್ಯದಲ್ಲಿ 2ನೇ ಹಂತದ ಮತದಾನ ಮೇ 7 ರಂದು, ಮಂಗಳವಾರ ನಿಗದಿಯಾಗಿದೆ. ಚುನಾವಣಾ ಪರ್ವ ದೇಶದ ಗರ್ವವಾಗಿದ್ದು, ವಿವಿಧ ಸಾಧ್ಯತೆಗಳನ್ನು ಅನ್ವೇಷಿಸಿ, ಯೋಗ್ಯ ವ್ಯಕ್ತಿಯನ್ನು ಆರಿಸಿ ಎಂದು, ಯುವ ಮತದಾರರಲ್ಲಿ ಮನವಿ ಮಾಡಿದ್ದಾರೆ, ರಾಜ್ಯ ಸಾಹಿತ್ಯ ಅಕಾದೆಮಿ ಮಾಜಿ ಅಧ್ಯಕ್ಷರಾದ, ಧಾರವಾಡದ ಪ್ರೊಫೆಸರ್ ಮಾಲತಿ ಪಟ್ಟಣಶೆಟ್ಟಿ.

<><><>

ಪ್ರೊ. ಮಾಲತಿ ಪಟ್ಟಣಶೆಟ್ಟಿ 32 ಸೆಕೆಂದುಗಳು

<><><>

ಬಾಗಲಕೋಟೆಯ ವಿದ್ಯಾಗಿರಿ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿನಿ, ಮೇಧಾ ಬಾಲಕೃ ್ಣ ಚಿತ್ರಗಾರ, ಈ ಬಾರಿಯ ಮೇ 7, 2024ರ ಲೋಕಸಭೆ ಚುನಾವಣೆಯಲ್ಲಿ, ತಮ್ಮ ಮೊದಲ ಮತ ಚಲಾಯಿಸಲಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಅವರು ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಮೇಧಾ ಬಾಲಕೃಷ್ಣ ಚಿತ್ರಗಾರ 24 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಕರ್ನಾಟಕ ಶಾಸನ ಸಾಹಿತ್ಯ ಪರಿ ‘ತ್ತಿನ, ಮೊದಲ ಮಹಾಧಿವೇಶನ, ಇಂದು ಮತ್ತು ನಾಳೆ, ಧಾರವಾಡ ವಿದ್ಯಾಗಿರಿಯ ಜನತಾ ಶಿಕ್ಷಣ ಸಮಿತಿ ಮಹಾವಿದ್ಯಾಲಯದಲ್ಲಿ ಆಯೋಜಿತವಾಗಿದೆ.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಉಪ ಕುಲಪತಿ ಡಾಕ್ಟರ್ ಡಿ.ವಿ. ಪರಮಶಿವಮೂರ್ತಿ ಸಮ್ಮೇಳನದ ಸರ್ವಾಧ್ಯಕ್ಷ ರಾಗಿದ್ದಾರೆ. ಶಿ.ಚೆ.ನಂದಿಮಠ ಶಾಸನ ಸಾಹಿತ್ಯ ಶ್ರೀ ಮೊದಲ ಪ್ರಶಸ್ತಿಯನ್ನು, ಚಿತ್ರದುರ್ಗದ ಶಾಸನ ವಿದ್ವಾಂಸ, ಡಾಕ್ಟರ್ ಬಿ. ರಾಜಶೇಖರಪ್ಪ ಅವರಿಗೆ ಪ್ರದಾನ ಮಾಡಲಾಗುತ್ತಿದೆ.

ಡಾಕ್ಟರ್ ಎಂ.ಎಂ. ಕಲಬುರ್ಗಿ ಶಾಸನ ಸಾಹಿತ್ಯ ಪ್ರಶಸ್ತಿಯನ್ನು, ಹುಬ್ಬಳ್ಳಿಯ ಹಿರಿಯ ವಿದ್ವಾಂಸ ಡಾಕ್ಟರ್ ಬಿ.ವಿ. ಶಿರೂರ ಅವರಿಗೆ, ಡಾಕ್ಟರ್ ಬಿ.ಆರ್. ಹಿರೇಮಠ ಸಂಶೋಧನ ಶ್ರೀ ಪ್ರಶಸ್ತಿಯನ್ನು, ಕರ್ನಾಟಕ ಇತಿಹಾಸ ಅಕಾದೆಮಿ ಅಧ್ಯಕ್ಷ, ಬೆಂಗಳೂರಿನ ಡಾಕ್ಟರ್ ದೇವಕೊಂಡಾರೆಡ್ಡಿ ಅವರಿಗೆ, ಗಣ್ಯರು ಪ್ರದಾನ ಮಾಡಿ, ಗೌರವಿಸಲಿದ್ದಾರೆ.

ಇಂದು ಮತ್ತು ನಾಳೆ, ಧಾರವಾಡ ವಿದ್ಯಾಗಿರಿಯ, ಜೆ.ಎಸ್.ಎಸ್. ಮಹಾವಿದ್ಯಾಲಯದ, ಧರ್ಮಸ್ಥಳ ರತ್ನವರ್ಮ ಹೆಗ್ಗಡೆ ಸಭಾಂಗಣದಲ್ಲಿ, ಐತಿಹಾಸಿಕ ಚಿತ್ರಕಲಾ ಕೃತಿಗಳು ಹಾಗೂ ಪುರಾತತ್ವ ಸ್ಮಾರಕಗಳ ಛಾಯಾಚಿತ್ರ ಪ್ರದರ್ಶನ ಗಮನ ಸೆಳೆಯಲಿದೆ ಎಂದು, ಕರ್ನಾಟಕ ಶಾಸನ ಸಾಹಿತ್ಯ ಪರಿಷತ್ ಅಧ್ಯಕ್ಷೆ ಹನುಮಾಕ್ಷಿ ಗೋಗಿ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ದೇಶ ಸಣ್ಣ ಭೂ ಹಿಡುವಳಿದಾರರಿಂದ ಕೂಡಿದ್ದು, ಸಣ್ಣ ರೈತರ ಹಿತಾಸಕ್ತಿಗೆ ಎನ್.ಡಿ.ಎ. ಸರ್ಕಾರ ಬದ್ಧವಾಗಿದೆ. **8** ಸಾವಿರ ರೈತ ಉತ್ಪಾದಕರ ಸಂಘಟನೆಗಳನ್ನು ದೇಶಾದ್ಯಂತ ರಚಿಸಲಾಗಿದೆ. ಉತ್ಪಾದನಾ ಪ್ರಮಾಣ ಹೆಚ್ಚಿಸಲು ಹಾಗೂ ಮಾರುಕಟ್ಟೆಯಲ್ಲಿ ರೈತರ ಉತ್ಪನ್ನಗಳಿಗೆ ಯೋಗ್ಯಬೆಲೆ ದೊರೆಯುವಂತೆ ಮಾಡಲಾಗುವುದು ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ಬೆಳಗಾವಿಯ, ಮಾಲಿನಿ ಸಿಟಿ ಮೈದಾನದಲ್ಲಿ ಆಯೋಜಿಸಿದ್ದ, ‘ವಿಜಯ ಸಂಕಲ್ಪ ಸಮಾವೇಶ’ದಲ್ಲಿ, ತಮ್ಮ ಪಕ್ಷದ ಅಭ್ಯರ್ಥಿ ಜಗದೀಶ ಶೆಟ್ಟರ ಹಾಗೂ ಅಣ್ಣಾಸಾಹೇಬ್ ಜೊಲ್ಲೆ ಪರ ಮತಯಾಚಿಸಿ, ಅವರು ಮಾತನಾಡಿದರು.

<><><>

ಬಹುಮತದ ಸ್ಥಿರ ಸರ್ಕಾರ ಇದ್ದರೆ, ದೇಶದ ಬಗ್ಗೆ ಜಗತ್ತಿಗೆ ಭರವಸೆ ಹುಟ್ಟುತ್ತದೆ. ದಶಕದ ಹಿಂದೆ ದೇಶದ ಮತದಾರರು ನೀಡಿದ ಒಂದೊಂದು ಮತವೂ, ದೇಶದಲ್ಲಿ ಪರಿಣಾಮಕಾರಿ ಬದಲಾವಣೆ ತಂದಿದೆ ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ ತಿಳಿಸಿದರು. ಉತ್ತರಕನ್ನಡ ಜಿಲ್ಲೆ ಶಿರಸಿಯ ಮಾರಿಕಾಂಬಾ ಕ್ರೀಡಾಂಗಣದಲ್ಲಿ, ಉತ್ತರಕನ್ನಡ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ವಿಶ್ವೇಶ್ವರ ಹೆಗಡೆ ಕಾಗೇರಿ ಪರ ಮತಯಾಚಿಸಿ ಅವರು, ಮಾತನಾಡಿದರು. ಶಿರಸಿಯ ಅಡಕೆಗೆ ಭೌಗೋಳಿಕ ಹೆಗ್ಗುರುತು (ಜಿ.ಐ.ಟ್ಯಾಗ್) ನೀಡಿದ್ದು, ಆಯು ‘ ವೈದ್ಯ ಪದ್ಧತಿಯನ್ನು ಜಗತ್ತಿಗೆ ಪರಿಚಯಿಸಿದ್ದು ಹಾಗೂ ಸಿರಿ ಧಾನ್ಯಗಳನ್ನು ಜಗತ್ತಿಗೆ ಪರಿಚಯಿಸಿದ್ದು ತಮ್ಮ ಸರ್ಕಾರ ಎಂದು ಪ್ರಧಾನಮಂತ್ರಿ ನುಡಿದರು. ಕದಂಬ ರಾಜರ ಆಳ್ವಿಕೆ ಹಾಗೂ ಅವರ ಕೊಡುಗೆಯನ್ನು ಪ್ರಧಾನಿ ಸ್ಮರಿಸಿದರು.

<><><>

ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ, ವಿಕಸಿತ ಭಾರತಕ್ಕಾಗಿ, ದಿನದ 24 ಗಂಟೆಯೂ ಕೆಲಸ ಮಾಡುತ್ತಿದೆ ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ದಾವಣಗೆರೆಯಲ್ಲಿ, ಹಾವೇರಿ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಬಸವರಾಜ ಬೊಮ್ಮಾಯಿ ಮತ್ತು ದಾವಣಗೆರೆ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಗಾಯತ್ರಿ ಸಿದ್ಧೇಶ್ವರ ಪರ, ಪ್ರಚಾರ ಸಭೆಯನ್ನುದ್ದೇಶಿಸಿ ಮಾತನಾಡಿದರು. ಎನ್.ಡಿ.ಎ. ಸರ್ಕಾರ ಕರ್ನಾಟಕದ ಅಭಿವೃದ್ಧಿಗೆ ಕೆಲಸ ಮಾಡಿದೆ. ನೂತನ ಶಿಕ್ಷಣ ನೀತಿಯನ್ನು ಜಾರಿಗೊಳಿಸಿ, ಮಕ್ಕಳಲ್ಲಿ ಕೌಶಲಾಭಿವೃದ್ಧಿಗೆ ಒತ್ತು ನೀಡಿದೆ ಎಂದು, ಪ್ರಧಾನಿ ನುಡಿದರು.

<><><>

ಕಲ್ಯಾಣ ಕರ್ನಾಟಕದ ಅಭಿವೃದ್ಧಿಯನ್ನು ಬಿಜೆಪಿ ತನ್ನ ಜವಾಬ್ದಾರಿ ಎಂದೇ ಭಾವಿಸಿದ್ದಾಗಿ, ಪ್ರಧಾನಮಂತ್ರಿ ನರೇಂದ್ರ ಮೋದಿ ನುಡಿದರು. ವಿಜಯನಗರದ ಹೊಸಪೇಟೆಯಲ್ಲಿ, ಬಳ್ಳಾರಿ ಲೋಕಸಭಾ ಕ್ಷೇತ್ರದ ಪರಿಶಿಷ್ಟ ಪಂಗಡ ಮೀಸಲು ಅಭ್ಯರ್ಥಿ ಬಿ. ಶ್ರೀರಾಮುಲು ಪರ, ಪ್ರಚಾರ ಸಭೆಯಲ್ಲಿ ಮಾತನಾಡಿದ ಪ್ರಧಾನಿ, ಬಳ್ಳಾರಿ ಮತ್ತು ವಿಜಯನಗರ ಅವಳಿ ಜಿಲ್ಲೆಗಳ ಸುತ್ತಮುತ್ತ ಅನೇಕ ಕಾರ್ಖಾನೆಗಳಿದ್ದು, ಇನ್ನೂ ಕೆಲ ಹೊಸ ಉದ್ಯಮಗಳು ಸೃಷ್ಟಿಯಾದರೆ, ಈ ಭಾಗದ ಯುವಜನತೆಗೆ ಉದ್ಯೋಗ ಸೃಷ್ಟಿ ಆಗಲಿದೆ ಎಂದರು.

<><><>

ಚಿಕ್ಕಮಗಳೂರು ಜಿಲ್ಲೆಯ ಮುಳ್ಳಯ್ಯನಗಿರಿ ಸಮೀಪ, ಮಾಣಿಕ್ಯಧಾರಾ ಬಳಿ, ಖಾಸಗಿ ಮಿನಿ ಬಸ್ ಕಂದಕಕ್ಕೆ ಉರುಳಿಬಿದ್ದ ಪರಿಣಾಮ, ಹಿರಿಯೂರು ತಾಲೂಕು ಆದಿವಾಲ ಗ್ರಾಮದಿಂದ, ಪ್ರವಾಸಕ್ಕೆ ಬಂದ ಓರ್ವ ಬಾಲಕ ಸಾವನ್ನಪ್ಪಿ, 25ಕ್ಕೂ ಹೆಚ್ಚು ಜನರಿಗೆ ಗಾಯಗಳಾಗಿವೆ. ಆ ಪೈಕಿ 6 ಜನರಿಗೆ ಗಂಭೀರ ಗಾಯಗಳಾಗಿದ್ದು, ಚಿಕ್ಕಮಗಳೂರಿನ ವಿವಿಧ ಆಸ್ಪತ್ರೆಗಳಿಗೆ ದಾಖಲಿಸಿ, ಚಿಕಿತ್ಸೆ ನೀಡಲಾಗಿದೆ.

<><><>

ವಿಜಯಪುರ ಜಿಲ್ಲೆ ಇಂಡಿ ತಾಲೂಕಿನ ಲಚ್ಯಾಣ ಗ್ರಾಮದಲ್ಲಿ, ಶಂಕರಲಿಂಗ ರಥೋತ್ಸವದ ವೇಳೆ ರಥದ ಚಕ್ರಕ್ಕೆ ಸಿಲುಕಿ ಇಬ್ಬರು ಮೃತಪಟ್ಟಿದ್ದು, ಮತ್ತೋರ್ವರಿಗೆ ಗಂಭೀರ ಗಾಯಗಳಾದ ದುರ್ಘಟನೆ ಸಂಭವಿಸಿದೆ.

<><><>

ರಾಜ್ಯದ ಒಳನಾಡು ಜಿಲ್ಲೆಗಳಲ್ಲಿ ಮೇ 2ರ ವರೆಗೆ, ಬಿಸಿಗಾಳಿ ಅಲೆ ಹೆಚ್ಚಾಗುವ ಸಾಧ್ಯತೆಯಿದೆ. ರಾಜ್ಯ ಹವಾಮಾನ ಇಲಾಖೆ 17 ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಘೋಷಿಸಿದೆ. ಕರಾವಳಿ ಕರ್ನಾಟಕದಲ್ಲಿ ಬಿಸಿ ಮತ್ತು ಶು ್ಕ ವಾತಾವರಣ ಹೆಚ್ಚಾಗಿರುವ ಸಾಧ್ಯತೆಯಿದೆ.

<><><>

ರಾಯಚೂರು, ಯಾದಗಿರಿ, ಕಲಬುರಗಿ, ವಿಜಯಪುರ, ಬಾಗಲಕೋಟೆ, ಕೊಪ್ಪಳ, ಬೀದರ್, ವಿಜಯನಗರ, ಗದಗ, ದಾವಣಗೆರೆ, ಚಿತ್ರದುರ್ಗ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ, ಹಾವೇರಿ, ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಇಂದಿನಿಂದ ಗುರುವಾರದ ವರೆಗೆ ಬಿಸಿ ಗಾಳಿ ಬೀಸುವ ಸಂಭವವಿದೆ ಎಂದು, ಭಾರತೀಯ ಹವಾಮಾನ ಇಲಾಖೆ, ಮುನ್ನೆಚ್ಚರಿಕೆ ನೀಡಿದೆ.

<><><>

ಬಿಸಿ ಗಾಳಿ ಜನರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆ ಇದ್ದು, ಜನ ಆರೋಗ್ಯದ ಬಗ್ಗೆ ಸೂಕ್ತ ಮುಂಜಾಗ್ರತೆ ವಹಿಸುವಂತೆ, ಸಲಹೆ ನೀಡಲಾಗಿದೆ. ಮಂಗಳವಾರ, 30ನೇ ತಾರೀಖಿನಿಂದ ಕೆಲವು ಜಿಲ್ಲೆಗಳಲ್ಲಿ ಹಗುರ ಮಳೆಯಾಗಲಿದೆ ಎಂದು, ಇಲಾಖೆ ವರದಿ ತಿಳಿಸಿದೆ.

<><><>

ಕೊಡಗಿನ ನಾಪೋಕ್ಲು ಚೆರಿಯಪರಂಬುವಿನ, ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆದ 'ಕುಂಡ್ಯೋಳಂಡ್ ಕಪ್', ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಯಲ್ಲಿ, ಚೇಂದಂಡ ತಂಡವು, 3ನೇ ಬಾರಿ ಪ್ರಶಸ್ತಿ ಗೆದ್ದಿತು. ಅಂತಿಮ ಪಂದ್ಯದಲ್ಲಿ, ಚೇಂದಂಡ 8–7 ಗೋಲುಗಳ ಅಂತರದಿಂದ, ನೆಲ್ಲಮಕ್ಕಡ ತಂಡವನ್ನು ಪರಾಭವಗೊಳಿಸಿತು. ಒಟ್ಟು 360 ಕೊಡವ ಕುಟುಂಬಗಳ, 3 ಸಾವಿರಕ್ಕೂ ಅಧಿಕ ಹಾಕಿ ಆಟಗಾರರು ಪಾಲ್ಗೊಂಡ, ಹಾಕಿ ಟೂರ್ನಿಯ 24ನೇ ಆವೃತ್ತಿ 'ಕುಂಡ್ಯೋಳಂಡ್ ಕಪ್' ಗಿನ್ನಿಸ್ ದಾಖಲೆಗೆ ಸೇರ್ಪಡೆಯಾಗಿದೆ ಎಂದು, ಗಿನ್ನಿಸ್ ಬುಕ್ ಆಫ್ ರೆಕಾರ್ಡ್ಸ್ ಸಮಿತಿ ಸದಸ್ಯ ಸ್ವಪ್ನಿಲ್ ಘೋಷಿಸಿದರು.

<><><>

ಇಂದು, ವಿಶ್ವ ನೃತ್ಯ ದಿನ. ಜಾಗತಿಕ ಮೌಲ್ಯವಾಗಿ ನೃತ್ಯವನ್ನು ಪ್ರಚುರ ಪಡಿಸುವುದು, ಈ ದಿನಾಚರಣೆಯ ಉದ್ದೇಶ. ರಾಜಕೀಯ, ಸಾಂಸ್ಕೃತಿಕ ಹಾಗೂ ಸಾಂಪ್ರದಾಯಿಕ ಗಡಿಗಳನ್ನು ಮೀರಿ, ಎಲ್ಲ ನೃತ್ಯ ಪ್ರಕಾರಗಳನ್ನು ಭ್ರಾತೃತ್ವ ಬೆಸೆಯುವ ಮಾಧ್ಯಮವಾಗಿ ಬಳಸಬೇಕಾದ ಧ್ಯೇಯವನ್ನು, ನೃತ್ಯ ದಿನ ಧ್ವನಿಸುತ್ತದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ರೈತರ ನೆರವಿಗೆ ಧಾವಿಸಲು ಅನುವಾಗುವ ರೀತಿ, ಕೇಂದ್ರ ಬರ ಪರಿಹಾರ ನೀಡಲಿ – ಸಿದ್ದರಾಮಯ್ಯ ಆಗ್ರಹ.
- ಸಿಇಟಿ ಪರೀಕ್ಷೆ: ಪಠ್ಯಕ್ಕೆ ಹೊರತಾದ ಪ್ರಶ್ನೆ ಕೈಬಿಡಲು ತೀರ್ಮಾನ; ಎಂ.ಎಸ್. ಶ್ರೀಕರ.
- ಧಾರವಾಡದಲ್ಲಿ, ಇಂದು ಮತ್ತು ನಾಳೆ, ಕರ್ನಾಟಕ ಶಾಸನ ಸಾಹಿತ್ಯ ಪರಿ 'ತ್ತಿನ, ಮೊದಲ ಮಹಾಧಿವೇಶನ.
- ದಶಕದ ಹಿಂದೆ ದೇಶದ ಮತದಾರ ನೀಡಿದ ಒಂದೊಂದು ಮತ, ದೇಶವನ್ನು ಅಭಿವೃದ್ಧಿ ಪಥದಲ್ಲಿ ಮುನ್ನಡೆಸಿದೆ – ಪ್ರಧಾನಮಂತ್ರಿ ನರೇಂದ್ರ ಮೋದಿ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>

ಹರ್ಷ